# ಕನ್ನಡ ವಿಶ್ವವಿದ್ಯಾಲಯ, ಹಂಪಿ

## ವಿದ್ಯಾರಣ್ಯ

## 33ನೇ ಘಟಿಕೋತ್ಸವದಲ್ಲಿ ನಾಡೋಜ ಗೌರವ ಪುರಸ್ಕೃತರು

## ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ



**ಭಾ**ರತದ ಪ್ರತಿಷ್ಠಿತ ಸುಪ್ರೀಂಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿಗಳಾದ ಶಿವರಾಜ ವಿ. ಪಾಟೀಲರು ಈ ದೇಶ ಕಂಡ ಅಪ್ರತಿಮ ನ್ಯಾಯಾಧೀಶರು. ಬಿಸಿಲನಾಡೆಂದೇ ಹೆಸರಾದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಕುಗ್ರಾಮವಾದ ಮಲದಕಲ್‌ನಲ್ಲಿ ಜನವರಿ ೧೨, ೧೯೪೦ರಂದು ಜನಿಸಿದ ಶ್ರೀಯುತರು ಇಂದು ಅಂತಾರಾಷ್ಟ್ರೀಯ ಮನ್ನಣೆಗೆ ಪಾತ್ರರಾಗಿದ್ದಾರೆ. ಹುಟ್ಟಿದ ಊರಿನಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಪ್ರೌಢಶಿಕ್ಷಣವನ್ನು ರಾಯಚೂರಿನಲ್ಲಿ, ಪದವಿ ಹಾಗೂ ಕಾನೂನು ಪದವಿಯನ್ನು ಕಲಬುರಗಿಯಲ್ಲಿ ಪಡೆದು, ನ್ಯಾಯವಾದಿಯಾಗಿ ತಮ್ಮ ವೃತ್ತಿಯನ್ನು ಕಲಬುರಗಿಯಲ್ಲಿ ಜುಲೈ ೧೯೬೨ರಲ್ಲಿ ಪ್ರಾರಂಭಿಸಿದರು. ತಾವು ಕಲಿತ ಕಾನೂನು ಕಾಲೇಜಿನಲ್ಲಿಯೇ ಅರೆಕಾಲಿಕ ಉಪನ್ಯಾಸಕರಾಗಿ, ಗೌರವ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. ೧೯೯೦ರವರೆಗೆ ಕಲಬುರಗಿ ಹಾಗೂ ನಂತರ ದಲ್ಲಿ ಬೆಂಗಳೂರಿನಲ್ಲಿ ನ್ಯಾಯವಾದಿಗಳಾಗಿ ತಮ್ಮ ಕಾನೂನಿನ ಪಾಂಡಿತ್ಯ ಹಾಗೂ ವಾಕ್‌ಚಾತುರ್ಯದ

ಮೂಲಕ ಗಮನ ಸೆಳೆದರು. ನಂತರ ಕರ್ನಾಟಕ ಹೈಕೋರ್ಟ್‌ನ ನ್ಯಾಯಾಧೀಶರಾಗಿ, ಮದ್ರಾಸ್ ಹೈಕೋರ್ಟ್‌ನ ಹಂಗಾಮಿ ಮುಖ್ಯ ನ್ಯಾಯಾಧೀಶರಾಗಿ ಮತ್ತು ರಾಜಸ್ಥಾನ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಗಳಾಗಿ ವಸ್ತುನಿಷ್ಠವಾದ ತೀರ್ಮಾನಗಳನ್ನು ನೀಡುವ ಮೂಲಕ ಆಯಾ ರಾಜ್ಯಗಳ ಜನಮನ್ನಣೆಯನ್ನು ಗಳಿಸಿದರು. ನಂತರ ೨೦೦೦ರಲ್ಲಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇಮಕಗೊಂಡು ರಾಷ್ಟ್ರಮಟ್ಟದಲ್ಲಿ ಅಪಾರ ಯಶಸ್ಸನ್ನು ಪಡೆದರು.

ಇವರಲ್ಲಿನ ನ್ಯಾಯಾಂಗದೃಷ್ಟಿ ಹಾಗೂ ನೀಡಿದ ತೀರ್ಮಾನಗಳು ಮಾನವೀಯ ನೆಲೆಯಲ್ಲಿ ಸಾಮಾಜಿಕ ನ್ಯಾಯ ನೀಡುವಲ್ಲಿ ಮಹತ್ವದ ಪಾತ್ರ ವಹಿಸಿವೆ. ಅಂತೆಯೇ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ಮತ್ತು ಹಂಗಾಮಿ ಅಧ್ಯಕ್ಷ ರಾಗಿ, ೨ಜಿ ಸ್ಪೆಕ್ಟ್ರಂ ತನಿಖೆಯ ಏಕವ್ಯಕ್ತಿ ಸಮಿತಿ ಅಧ್ಯಕ್ಷರಾಗಿ, ಕರ್ನಾಟಕದಲ್ಲಿ ಬಾಲ್ಯವಿವಾಹ ತಡೆಗಟ್ಟುವ ಕೋರ್ ಕಮಿಟಿಯ ಅಧ್ಯಕ್ಷರಾಗಿ, ಕರ್ನಾಟಕ ಲೋಕಾಯುಕ್ತರಾಗಿ ನೇಮಕಗೊಳ್ಳುವ ಮೂಲಕ ತಮ್ಮ ವೃತ್ತಿಪರತೆಯನ್ನು ಇತರರಿಗೆ ಅನುಕರಣೀಯವಾಗುವಂತೆ ಮಾಡಿದ್ದಾರೆ. "ಯಾವುದೇ ಕಾನೂನು ಅರ್ಥಪೂರ್ಣ ವಾಗಬೇಕಾದರೆ ಅದು ಕೇವಲ ಕಾಗದದ ಮೇಲೆ ಉಳಿಯದೆ ಜೀವನದ ನಡವಳಿಕೆಯ ಭಾಗವಾಗಬೇಕು" ಎಂಬ ಧ್ಯೇಯವಾಕ್ಯವನ್ನು ಜೀವನದುದ್ದಕ್ಕೂ ಪರಿಪಾಲಿಸಿದ್ದಾರೆ. ಅಮೆರಿಕ, ರಷ್ಯಾ, ಆಸ್ಟ್ರೇಲಿಯಾ, ಇಂಗ್ಲೆಂಡ್ ಮುಂತಾದ ೧೦ಕ್ಕೂ ಹೆಚ್ಚು ವಿದೇಶಗಳಿಗೆ ಭೇಟಿ ನೀಡಿ ಸಭೆ, ಸಮ್ಮೇಳನ, ಕಾರ್ಯಾಗಾರಗಳಲ್ಲಿ ವಿದ್ವತ್‌ಪೂರ್ಣ ಉಪನ್ಯಾಸ ಗಳನ್ನು ನೀಡಿದ್ದಾರೆ. ಜೊತೆಗೆ ಆಯಾ ದೇಶಗಳ ನ್ಯಾಯಾಂಗ ಪದ್ಧತಿಯನ್ನು ಅಧ್ಯಯನ ಮಾಡಿದ್ದಾರೆ.

ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲರು ತಮ್ಮ ಬದುಕಿನುದ್ದಕ್ಕೂ ನ್ಯಾಯಾಂಗ ವ್ಯವಸ್ಥೆಯಲ್ಲಿ ದಣಿವರಿಯದೆ ದುಡಿಯುತ್ತಾ ಬಂದವರು. ಜೊತೆಗೆ ತಮ್ಮೊಳಗಿನ ಸೃಜನಶೀಲ ಮನಸ್ಸನ್ನು ಸಮಾಜದ ಬಹುಮುಖಿ ಒಳಿತಿಗಾಗಿ ತೊಡಗಿಸಿಕೊಳ್ಳುವಂತೆ ಮಾಡಿದವರು. ಅಂತೆಯೇ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಇವರ ಕೊಡುಗೆ ಜನಮನ್ನಣೆಗೆ ಪಾತ್ರವಾಗಿದೆ. ಕನ್ನಡ ಮತ್ತು ಇಂಗ್ಲಿಷ್ ಎರಡು ಭಾಷೆಯಲ್ಲೂ ತಮ್ಮ ಸಾಹಿತ್ಯ ರಚನೆ ಮಾಡುವ ಮೂಲಕ ದ್ವಿಭಾಷಾ ಪ್ರಬುದ್ಧತೆಯನ್ನು ಪಡೆದವರಾಗಿದ್ದಾರೆ. ಇವರ ಕೃತಿಗಳು, ಶ್ರೀ ಶರಣ ಬಸವೇಶ್ವರರ ಚರಿತ್ರೆ, ಶಿಕ್ಷಣದ ಮಹತ್ವ, ಮಾನವ ಹಕ್ಕುಗಳು, ಭಾರತ ಸಂವಿಧಾನ ಮತ್ತು ವಿಶ್ವವಿದ್ಯಾಲಯಗಳು, ವಿನಯಶೀಲತೆ, ಮಾನವೀಯತೆ ಮತ್ತು ಮಾನವ ಹಕ್ಕುಗಳು, Humility, Humanity and Human Rights, Justice Shivaraj V. Patil on Human Rights, ಮಾನವ ಘನತೆಯ ಪರವಾದ ಮಾನವೀಯ ಹಕ್ಕುಗಳ ಚಿಂತನೆಗಳು, Words of wisdom Part-1, ಅನುಭಾವದ ನುಡಿಗಳು, ಭಾಗ–೧, Words of wisdom Part-2, ಅನುಭಾವದ ನುಡಿಗಳು ಭಾಗ–೨, ಶಿವನುಡಿಗಳು, ಮುಂಜಾವಿ ಗೊಂದು ನುಡಿಕಿರಣ–೩೬೫, Good Morning–365, Speaking for Humanity, ಸಾಧ್ವಿ ಶಿರೋಮಣಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ, ಕಳೆದ ಕಾಲ ನಡೆದ ದೂರ(ಆತ್ಮಕಥನ), Time Spent Distance Travelled(Autobiogra phy), ಸಂಜೆಗೊಂದು ನುಡಿಚಿಂತನ–೩೬೫, Good Evening-365 ಮುಂತಾದವುಗಳು.

ತಮ್ಮ ವೃತ್ತಿ ಹಾಗೂ ಪ್ರವೃತ್ತಿಯ ಬದುಕಿಗೆ ಅನುಗುಣವಾಗಿ ಅನೇಕ ಸಂಘ ಸಂಸ್ಥೆ, ಸರಕಾರಿ ಸಂಸ್ಥೆ, ವಿಶ್ವವಿದ್ಯಾಲಯದ ಶೈಕ್ಷಣಿಕ ಸಮಿತಿಗಳಲ್ಲಿ ಅಧ್ಯಕ್ಷರಾಗಿ, ಸದಸ್ಯರಾಗಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇವರಿಗೆ ರಾಜ್ಯ ಮತ್ತು ರಾಷ್ಟ್ರ ಮಾನ್ಯತೆಯ ೪೦ಕ್ಕೂ ಹೆಚ್ಚು ಗೌರವ–ಸನ್ಮಾನ–ಪ್ರಶಸ್ತಿಗಳು ದೊರೆತಿದ್ದು, ಬಹುತ್ವದ ಕೀರ್ತಿಗೆ ಭಾಜನವಾಗಿವೆ. ಇವರ ಸೇವೆ ಮತ್ತು ಸಾಧನೆಯನ್ನು ಗುರುತಿಸಿ ೨೦೦೪ರಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯ, ೨೦೧೫ರಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ೨೦೨೧ರಲ್ಲಿ ಜೈಪುರದ ಐ.ಎಸ್.ಎಸ್.ಡೀಮ್ಡ್ ವಿಶ್ವವಿದ್ಯಾಲಯ, ೨೦೨೧ರಲ್ಲಿ ಕಲಬುರಗಿಯ ಶ್ರೀ ಶರಣಬಸವ ವಿಶ್ವವಿದ್ಯಾಲಯ, ೨೦೨೪ರಲ್ಲಿ ದಾವಣಗೆರೆ ವಿಶ್ವವಿದ್ಯಾಲಯಗಳು ಗೌರವ ಡಾಕ್ಟರೇಟ್‌ಗಳನ್ನು ನೀಡಿವೆ. ೨೦೧೮ರ ಸಾಲಿನ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಂದಿದೆ. ಪ್ರಸ್ತುತ ಸಂವೇದನಾಶೀಲ ವ್ಯಕ್ತಿಯಾಗಿ ಸಾರ್ಥಕ ಬದುಕನ್ನು ನಡೆಸುತ್ತಾ ಸಮಾಜಕ್ಕೆ ಮಾದರಿಯಾಗಿದ್ದಾರೆ. ಜಾತೀಯತೆ, ಅಪರಾಧ ಮತ್ತು ಭ್ರಷ್ಟಾಚಾರಮುಕ್ತ ಸಮಾಜವನ್ನು ನಿರ್ಮಾಣ ಮಾಡುವ ಸಾತ್ವಿಕ ಹೋರಾಟದ ತುಡಿತವನ್ನು ಹೊಂದಿರುವ ಕಾಯಕರತ್ನ, ನ್ಯಾಯರತ್ನ, ಕಾಯಕಯೋಗಿ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ್ ಅವರು ಕನ್ನಡದ ಆಸ್ತಿಯಾಗಿದ್ದಾರೆ; ಸರ್ವರಿಗೂ ಮಾದರಿಯಾಗಿದ್ದಾರೆ.

ಹೀಗಾಗಿ ಮಾನ್ಯ ನ್ಯಾಯಮೂರ್ತಿ ಡಾ. ಶಿವರಾಜ ವಿ. ಪಾಟೀಲ್ ಅವರು ನ್ಯಾಯಾಂಗ, ಸಮಾಜ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮವಾದ ಕೊಡುಗೆಯನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು ೩೩ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸುತ್ತದೆ.

# ಪದ್ಮಶ್ರೀ ಎಂ. ವೆಂಕಟೇಶ್‌ಕುಮಾರ



**ಪ**ದ್ಮಶ್ರೀ ಎಂ.ವೆಂಕಟೇಶ್‌ಕುಮಾರ ಅವರು ೧ನೇ ಜುಲೈ, ೧೯೫೩ರಲ್ಲಿ ಬಳ್ಳಾರಿ ಜಿಲ್ಲೆಯ ಲಕ್ಷ್ಮೀಪುರ ಎಂಬ ಕುಗ್ರಾಮದಲ್ಲಿ ಜನಿಸಿದರು. ಇವರ ತಂದೆಯವರಾದ ಹುಲೇಪ್ಪನವರು ಪ್ರಸಿದ್ಧ ಜಾನಪದ ಕಲಾವಿದರು. ತಾಯಿ ಪಾರ್ವತಮ್ಮನವರ ಸಹೋದರರಾದ ಬಳ್ಳಾರಿ ಮೂಲದ ಬೆಳಗಲ್ಲು ವೀರಣ್ಣರವರು ಶ್ರೇಷ್ಠ ರಂಗನಾಟಕ ಕಲಾವಿದರಾಗಿದ್ದರು. ಇವರ ತಾಯಿ, ತಂದೆ ಹಾಗೂ ಸೋದರಮಾವನವರು ಇವರನ್ನು ೧೯೬೦ರಲ್ಲಿ ತ್ರಿಭಾಷಾ ಕವಿಗಳು, ಉಭಯ ಗಾಯನ ವಿಶಾರದರು ಹಾಗೂ ತ್ರಿಕಾಲ ಪೂಜಾನಿಷ್ಠರೂ ಆದ ಗದಗಿನ ಪಂಡಿತ ಪುಟ್ಟರಾಜ ಗವಾಯಿಗಳ ವೀರೇಶ್ವರ ಪುಣ್ಯಾಶ್ರಮಕ್ಕೆ ಸೇರಿಸಿದರು. ಅಲ್ಲಿಂದ ೧೨ ವರ್ಷಗಳ ಕಾಲ ಗುರುಕುಲ ಪದ್ಧತಿಯಲ್ಲಿ ಪರಮ ಪೂಜ್ಯ ಪುಟ್ಟರಾಜ ಗವಾಯಿಗಳು ಇವರಿಗೆ ಕಿರಾಣಾ ಮತ್ತು ಗ್ವಾಲಿಯರ್ ಘರಾಣೆ ಸಂಗೀತವನ್ನು ಕಲಿಸಿದರು. ನಂತರದಲ್ಲಿ ಮುಂಬಯಿಯ ಗಂಧರ್ವ ಮಹಾವಿದ್ಯಾಲಯದಿಂದ ಸಂಗೀತದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದುಕೊಂಡರು.

ಇವರು ಗದಗಿನ ವಿಜಯ ಕಲಾ ಮಂದಿರ, ಹರಪನಹಳ್ಳಿಯ ಟಿ.ಎಂ.ಎ. ಸೊಸೈಟಿ ಮತ್ತು ಉಡುಪಿಯ ಮುಕುಂದ ಕೃಪಾದಲ್ಲಿ ತಮ್ಮ ಉಪನ್ಯಾಸ ವೃತ್ತಿಯನ್ನು ಆರಂಭಿಸಿದರು. ನಂತರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡದ ಕರ್ನಾಟಕ ಕಾಲೇಜಿನ ಸಂಗೀತ ವಿಭಾಗದಲ್ಲಿ ೩೩ ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿ, ೨೦೧೫ರಲ್ಲಿ ನಿವೃತ್ತರಾಗಿ ಇಂದು ಧಾರವಾಡದ ವಿದ್ಯಾಗಿರಿಯಲ್ಲಿ ವಾಸವಾಗಿದ್ದಾರೆ. ಸಂಗೀತ ಕ್ಷೇತ್ರದಲ್ಲಿಯ ಇವರ ಪಾಂಡಿತ್ಯ ಹಾಗೂ ಪ್ರತಿಭೆಯನ್ನು

ಗುರುತಿಸಿದ ಪಂಡಿತ ಭೀಮಸೇನ ಜೋಶಿ ಅವರು ಮೊದಲ ಬಾರಿಗೆ ಪುಣೆಯಲ್ಲಿ ನಡೆದ ಸವಾಯಿ ಗಂಧರ್ವ ಸಂಗೀತ ಮಹೋತ್ಸವದಲ್ಲಿ ಪ್ರದರ್ಶನ ನೀಡಲು ಆಹ್ವಾನ ನೀಡಿದ್ದುದು ಇವರ ಸಂಗೀತ ಬದುಕಿಗೆ ಹೊಸ ತಿರುವನ್ನು ನೀಡಿತು.

ಇವರ ಸಂಗೀತದಲ್ಲಿ ವಿಶೇಷವಾಗಿ ಸರ್ಗಮ್ ಮಾದರಿಗಳಲ್ಲಿಯ ಕರ್ನಾಟಕ ಅಂಶಗಳ ಕುರುಹುಗಳಿರುವುದನ್ನು ಕಾಣಬಹುದು. ಜನ್ಮತಃ ಸುಮಧುರವಾದ ಕಂಚಿನ ಕಂಠವನ್ನು ಹೊಂದಿದ್ದು, ಅದು ಸಾಂಪ್ರದಾಯಕ ಸಮೃದ್ಧಿ, ಆಳವಾದ ಭಕ್ತಿ, ಭಾವಸಿದ್ಧಿ ಹಾಗೂ ಅಪಾರ ಧನ್ಯತೆಯನ್ನು ಒಳಗೊಂಡಿದೆ. ಇವರು ಸಂಗೀತ ಪರಂಪರೆಯ ಮೂಲಕ ವಚನ ಮತ್ತು ಹರಿದಾಸ ಕೃತಿಗಳಲ್ಲಿನ ಅಧ್ಯಾತ್ಮ ತತ್ವವನ್ನು ಬಿತ್ತರಿಸುತ್ತಾ ಗಾಯನವನ್ನು ಪ್ರಸ್ತುತಪಡಿಸುತ್ತಿದ್ದರೆ ವಾಗ್ದೇವಿಯು ಅವರ ನಾಲಿಗೆಯ ಮೇಲೆ ನಲಿಯುತ್ತಿದ್ದಂತೆ ಕೇಳುಗರ ಕರ್ಣಗಳು ಪುನೀತರಾದಂತೆನಿಸುತ್ತವೆ. ಆಕಾಶವಾಣಿ ಕೇಂದ್ರದ ಉಚ್ಛ ಶ್ರೇಣಿಯ ಶ್ರೇಷ್ಠ ಗಾಯಕರಾಗಿದ್ದು, ದಿಲ್ಲಿ ದೂರದರ್ಶನ ಕೇಂದ್ರ ಸೇರಿದಂತೆ ಅನೇಕ ದೂರದರ್ಶನ ವಾಹಿನಿಗಳಲ್ಲಿ ಬಹು ಬೇಡಿಕೆಯ ಅತ್ಯುತ್ತಮ ಸಂಗೀತ ಕಲಾವಿದರಾಗಿರುವರು. ತಮ್ಮ ಇಂಪಾದ ಧ್ವನಿಪಥದಲ್ಲಿ ಸಾಗುತ್ತಾ, ಕಲೆ ಮತ್ತು ಸಂಪ್ರದಾಯವನ್ನು ಎಲ್ಲ ಕಡೆಗೂ ಪಸರಿಸುವುದು ತಮ್ಮ ಪರಮ ಗುರಿಯನ್ನಾಗಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಇವರು ಅಪಾರ ಶಿಷ್ಯ ಬಳಗವನ್ನು ಹೊಂದಿದ್ದಾರೆ. ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಪ್ರತಿಷ್ಠಿತ ವೇದಿಕೆಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿ ಜನಮನ್ನಣೆಗೆ ಪಾತ್ರರಾಗಿದ್ದಾರೆ. ಶ್ರೀಯುತರ ಶಾಸ್ತ್ರೀಯ ಗಾಯನ, ವಚನ ಗಾಯನ ಹಾಗೂ ದಾಸರ ಪದಗಳ ಧ್ವನಿಮುದ್ರಿಕೆಗಳು ಕರ್ನಾಟಕ ಹಾಗೂ ಭಾರತದಾದ್ಯಂತ ಮನೆ ಮನೆಗಳಲ್ಲಿ ಜನಪ್ರಿಯ ಸಂಗೀತ ಭಂಡಾರಗಳಾಗಿರುವುದು ಹೆಮ್ಮೆಯ ಸಂಗತಿ.

ಪದ್ಮಶ್ರೀ ಎಂ. ವೆಂಕಟೇಶ್‌ಕುಮಾರವರು ತಮ್ಮ ಗಾಯನದ ಮೂಲಕ ಪ್ರಸಿದ್ಧ ರಾಗಿದ್ದು, ೩೦ಕ್ಕೂ ಹೆಚ್ಚು ಗೌರವ–ಸನ್ಮಾನ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ. ಅವುಗಳಲ್ಲಿ–ಸ್ವರಶ್ರೀ, ಸಂಗೀತ ಸುಧಾಕರ, ಸಂಗೀತ ರತ್ನ, ಕರ್ನಾಟಕ ರಾಜ್ಯೋತ್ಸವ, ಶರಣ ಸಾಹಿತ್ಯ ಪರಿಷತ್ತಿನ ರಮಣಶ್ರೀ, ವಚನ ಸಾಹಿತ್ಯಶ್ರೀ, ಮಹಾರಾಷ್ಟ್ರದ ಎಫ್‌ಐಇ ಫೌಂಡೇಶನ್ ಅವಾರ್ಡ್, ಸ್ವರಯೋಗಿನಿ ಡಾ. ಪ್ರಭಾ ಅತ್ರೆ ಕ್ಲಾಸಿಕಲ್ ಮ್ಯೂಸಿಕ್ ಅವಾರ್ಡ್, ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪುರಸ್ಕಾರ, ವತ್ಸಲಾಬಾಯಿ ಭೀಮಸೇನ ಜೋಶಿ ಪುರಸ್ಕಾರ, ಶ್ರೀಮತಿ ಕೃಷ್ಣಾ ಹಾನಗಲ್ ಸ್ಮಾರಕ ರಾಷ್ಟ್ರೀಯ ಪುರಸ್ಕಾರ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪುರಸ್ಕಾರ, ಐಟಿಸಿಯಿಂದ ಘರಾಣಾದ ಉಸ್ತಾದ ಫೈಯಾಜ್ ಅಹಮದಖಾನ್, ಉಸ್ತಾದ ನಿಯಾಜ್ ಅಹಮದಖಾನ್ ಸ್ಮಾರಕ ಪುರಸ್ಕಾರ, ಪದ್ಮಶ್ರೀ ರಾಷ್ಟ್ರೀಯ ಪುರಸ್ಕಾರ ಪ್ರಮುಖವಾದವುಗಳು. ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯ, ಮುದ್ದೇನಹಳ್ಳಿಯ ಸತ್ಯಸಾಯಿ ವಿಶ್ವವಿದ್ಯಾಲಯ ಹಾಗೂ ಬಳ್ಳಾರಿಯ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪದವಿಗಳು ಇವರನ್ನು ಅರಸಿ ಬಂದಿವೆ.

ಪದ್ಮಶ್ರೀ ಎಂ.ವೆಂಕಟೇಶ್‌ಕುಮಾರ್ ಅವರು ಸಂಗೀತ ಕ್ಷೇತ್ರಕ್ಕೆ ನೀಡಿದ ಅನುಪಮವಾದ ಕೊಡುಗೆಯನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು ೩೩ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸುತ್ತದೆ.

# ಕುಂ. ವೀರಭದ್ರಪ್ಪ



**ಕುಂ.** ವೀರಭದ್ರಪ್ಪ ಅವರು ೧ನೇ ಅಕ್ಟೋಬರ್, ೧೯೫೩ರಲ್ಲಿ ವಿಜಯನಗರ ಜಿಲ್ಲೆಯ ಕೊಟ್ಟೂರು ತಾಲ್ಲೂಕಿನ ಕುಂಬಾರ ಹಾಲಪ್ಪ ಹಾಗೂ ಕೊಟ್ರಮ್ಮರವರ ಮಗನಾಗಿ ಜನಿಸಿದರು. ಎಂ.ಎ.ಪದವೀಧರರಾದ ಇವರು ೧೯೭೫ರಿಂದ ೨೦೧೦ರವರೆಗೆ ಆಂಧ್ರ ಪ್ರದೇಶದ ಒಂದವಾಗಲಿ, ಗೂಳ್ಯಂ, ಡಿ. ಹಿರೇಹಾಳು ಗ್ರಾಮಗಳ ಪ್ರಾಥಮಿಕ ಶಾಲೆಗಳಲ್ಲಿ ಉಪಾಧ್ಯಾಯರಾಗಿ ಕಾರ್ಯನಿರ್ವಹಿಸಿದ್ದಾರೆ. ಐದು ದಶಕಗಳ ಕಾಲ ತಮ್ಮ ವಿಶಿಷ್ಟವಾದ ಬರವಣಿಗೆಯ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ 'ಕುಂವೀ' ಎಂಬ ಹೆಸರಿನಿಂದಲೇ ಚಿರಪರಿಚಿತರಾದರು. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಸಂಬಂಧಿಸಿದ ಸುಮಾರು ಐವತ್ತಕ್ಕೂ ಹೆಚ್ಚು ಮಹತ್ವದ ಮೌಲಿಕ ಕೃತಿಗಳನ್ನು ಸಾಹಿತ್ಯ ಹಾಗೂ ಸಂಸ್ಕೃತಿ ಲೋಕಕ್ಕೆ ನೀಡಿದ್ದಾರೆ.

ಇವರ ಕಥಾ ಸಂಕಲನಗಳಲ್ಲಿ – ಇನ್ನಾದರು ಸಾಯಬೇಕು, ಡೋಮ ಮತ್ತಿತರ ಕಥೆಗಳು, ಭಗವತಿ ಕಾಡು, ನಿಜಲಿಂಗ, ಕುಂ.ವೀ. ಕಥೆಗಳು, ಎಂಟರ್ ದಿ ಡ್ರಾಗನ್, ಮಣ್ಣೇ ಮೊದಲು, ನಿಗಿ ನಿಗಿ ಹಗಲು, ಅಪೂರ್ವ ಚಿಂತಾಮಣಿ ಕಥೆ, ಸುಶೀಲೆ ಎಂಬ ನಾಯಿಯೂ, ವಾಗಲಿ ಎಂಬ ಗ್ರಾಮವೂ, ಕರಿವೇಮಲ, ಭಳಾರೆ ವಿಚಿತ್ರಂ, ಸೂರ್ಯನ ಕೊಡೆ, ಕೂರ್ಮಾವತಾರ, ಕೊಳೆ, ಮಣ್ಣೇ ಮೊದಲು. ಕಾದಂಬರಿಗಳಲ್ಲಿ ಕಪ್ಪು, ಬೇಲಿ ಮತ್ತು ಹೊಲ, ಆಸ್ತಿ, ಕೆಂಡದ ಮಳೆ, ಮನಮೆಚ್ಚಿದ ಹುಡುಗಿ, ಹನುಮ, ಪ್ರೇಮವೆಂಬ ಹೊನ್ನುಡಿ, ಪ್ರತಿಧ್ವನಿ, ಶಾಮಣ್ಣ, ಕೊಟ್ರ ಹೈಸ್ಕೂಲಿಗೆ ಸೇರಿದ್ದು, ಯಾಪಿಲ್ಲು, ಅರಮನೆ, ಆರೋಹಣ, ಎನ್‌ಕೌಂಟರ್, ಎಲ್ಲೋ ಜೋಗಪ್ಪ ನಿನ್ನರಮನೆ, ಸುಪಾರಿ, ವಿಶ್ವಸುಂದರಿ, ಪಕ್ಷಿಗಳು, ಕಿಲುಬು, ಬೇಲಿಯ ಹೂಗಳು, ಕತ್ತೆಗೊಂದು ಕಾಲ, ಜೈ ಭಜರಂಗಬಲಿ, ಶ್ವಾನಾವಲಂಬನಕರಿ, ಮಾಕನಡಕು, ಏಕಾಂಬರ, ಹೇಮರೆಡ್ಡಿ ಮಲ್ಲಮ್ಮನ ಕಥೆಯು, ಬೇಟೆ, ದಿವಿ ಸೀಮೆಯ ಹಾಡು, ನೀನಿಲ್ಲದ ಮನೆ ಮುಂತಾದವುಗಳು. ಜೀವನ ಚರಿತ್ರೆಗಳಲ್ಲಿ – ರಾಹುಲ ಸಾಂಕೃತ್ಯಾಯನ, ಸುಭದ್ರಮ್ಮ ಮನ್ಸೂರು, ನೇತಾಜಿ ಸುಭಾಸ್ ಚಂದ್ರಭೋಸ್, ಚಾರ್ಲಿ ಚಾಪ್ಲಿನ್, ಶ್ರೀಕೃಷ್ಣದೇವರಾಯ, ಅನುವಾದಗಳಲ್ಲಿ – ತೆಲುಗು ಕಥೆ, ಒಂದು ಪೀಳಿಗೆಯ ತೆಲುಗು ಕಥೆ, ತನ್ನ ಮಾರ್ಗ,

ರಾಯಲ ಸೀಮೆಯ ಕಥೆಗಳು, ದಮ್ಮುಲಾಲ್ ಭೋಪ್ರ, ತೆಲುಗು ಸಾಹಿತ್ಯ ಲೋಕದ ಧ್ರುವತಾರೆ ಗುರುಜಾಡ ಅಪ್ಪಾರಾವ್ ಪ್ರಮುಖವಾಗಿವೆ. ಜಮೀನ್ದಾರಿ ವ್ಯವಸ್ಥೆ ಮತ್ತು ತೆಲುಗು ಸಾಹಿತ್ಯವೆಂಬ ವಿಮರ್ಶೆ, ರಾಯಲ ಸೀಮ ಎಂಬ ಅಂಕಣ ಬರಹ, ಗಾಂದಿ ಕ್ಲಾಸು ಎಂಬ ಆತ್ಮಕಥೆ ಮುಂತಾದ ಕೃತಿಗಳು ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಹೆಜ್ಜೆಗುರುತುಗಳನ್ನು ಮೂಡಿಸಿವೆ.

ಕುಂವೀ ಅವರ ಅನೇಕ ಕಾದಂಬರಿಗಳು ಜನಪ್ರಿಯ ಚಲನಚಿತ್ರಗಳಾಗಿರುವುದೇ ಇವರು ಜನಪರ ಲೇಖಕರು ಎಂಬುದಕ್ಕೆ ಸಾಕ್ಷಿ. ಇವರ ಬರಹಗಳು ನಮ್ಮ ಗ್ರಾಮೀಣ ಭಾಗದ ಸೊಗಡನ್ನು ಹಾಗೂ ಜೀವಪರ ವಾಸ್ತವವಾದಗಳನ್ನು ಒಳಗೊಂಡಿವೆ. ಇವರು ಕರ್ನಾಟಕ ಸಾಹಿತ್ಯ ಅಕಾಡೆಮಿ, ಅನುವಾದ ಅಕಾಡೆಮಿ, ಕರ್ನಾಟಕ ಚಲನಚಿತ್ರ ಸಮಿತಿಯ ಸದಸ್ಯರಾಗಿ, ಕನ್ನಡ ವಿಶ್ವವಿದ್ಯಾಲಯದಲ್ಲಿ ವಿಸಿಟಿಂಗ್ ಫೆಲೋ, ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ರೆಸಿಡೆಂಟ್ ರೈಟರ್ ಆಗಿಯೂ ಅತ್ಯಂತ ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಿದ್ದಾರೆ.

ಸಾಹಿತ್ಯ ಹಾಗೂ ಶಿಕ್ಷಣಕ್ಷೇತ್ರಗಳಿಗೆ ಇವರು ನೀಡಿದ ಕೊಡುಗೆಗಳನ್ನು ಗುರುತಿಸಿ ೧೫ಕ್ಕೂ ಹೆಚ್ಚು ರಾಷ್ಟ್ರೀಯ, ರಾಜ್ಯಮಟ್ಟದ ಪ್ರಶಸ್ತಿ – ಗೌರವ – ಸನ್ಮಾನಗಳು ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಎರಡು ಪುಸ್ತಕ ಬಹುಮಾನಗಳು, ಗೌರವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್‌ನಿಂದ ಹಲವು ಪುಸ್ತಕ ಬಹುಮಾನಗಳು, ಶಿರಸಂಗಿ ಲಿಂಗರಾಜ ಪ್ರಶಸ್ತಿ, ಕೂರ್ಮಾವತಾರ ಚಲನಚಿತ್ರ ಕಥಾ ಪ್ರಶಸ್ತಿ, ರಾಣೆಬೆನ್ನೂರಿನ ಲದ್ವಾ ಪ್ರತಿಷ್ಠಾನ ಪ್ರಶಸ್ತಿ, ಸಂದೇಶ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಲಂಕೇಶ ಪ್ರತಿಷ್ಠಾನ ಪ್ರಶಸ್ತಿ, ಬೆಟಗೇರಿ ಕೃಷ್ಣಶರ್ಮ ಕಾದಂಬರಿ ಪ್ರಶಸ್ತಿ, ಗೌರೀಶ ಕಾಯ್ಕಿಣಿ ಪ್ರಶಸ್ತಿ, ಪ್ರೊ. ಕೆ.ಜಿ. ಕುಂದಣಗಾರ ಗಡಿನಾಡ ಸಾಹಿತ್ಯ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್, ಕರ್ನಾಟಕ ರಾಜ್ಯ ಸರಕಾರದಿಂದ ರಾಜ್ಯೋತ್ಸವ ಪ್ರಶಸ್ತಿ, ಅರಮನೆ ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮುಂತಾದವುಗಳು ಇವರ ಸಾಹಿತ್ಯ ಸಾಧನೆಗಳ ಶಿಖರಕ್ಕೆ ಮುಕುಟಪ್ರಾಯವಾಗಿವೆ.

ಕುಂ.ವೀರಭದ್ರಪ್ಪನವರು ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಿಗೆ ನೀಡಿದ ಕೊಡುಗೆ ಯನ್ನು ಪುರಸ್ಕರಿಸಿ ಕನ್ನಡ ವಿಶ್ವವಿದ್ಯಾಲಯವು ೩೩ನೇ ನುಡಿಹಬ್ಬದಲ್ಲಿ ಪ್ರತಿಷ್ಠಿತ 'ನಾಡೋಜ' ಗೌರವ ಪದವಿಯನ್ನು ನೀಡಿ ಗೌರವಿಸುತ್ತದೆ.